**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC-1273/2022**

**ದಿನಾಂಕ 15-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಕಾಶೀನಾಥ ಪಾಟೀಲ | PW-2 |
| ತಂದೆಯ ಹೆಸರು | ಃ | ಗೊಲ್ಲಾಳಪ್ಪಗೌಡ | |
| ವಯಸ್ಸು | ಃ | 32 ವರ್ಷ | |
| ಉದ್ಯೋಗ | ಃ | ಒಕ್ಕಲುತನ | |
| ವಾಸಸ್ಥಳ | ಃ | ಯಡ್ರಾಮಿ | |

**ಮುಖ್ಯ ವಿಚಾರಣೆಃ ಶ್ರೀ ಎಸ್.ಎ.ಕೆ. ಅರ್ಜಿದಾರರ ಪರ ವಕೀಲರಿಂದಃ**

ಈಗ್ಗೆ ಸುಮಾರು 1 ವರ್ಷದ ಒಳಗೆ ಕಟ್ಟಿಸಂಗಾವಿ ಹತ್ತಿರ ಟ್ರಾಕ್ಟರ್ ವಾಹನದ ಚಾಲಕ ಟ್ರಾಕ್ಟರ್ ವಾಹನವನ್ನು ದ್ವಿ-ಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದ. ಕಟ್ಟಿಸಂಗಾವಿ ಸೇತುವೆ ದಾಟಿದ ನಂತರ ಒಂದು ಬಸ್ ನಿಲುಗಡೆ ಇದ್ದು ಅಲ್ಲಿ ಸದರಿ ಟ್ರಾಕ್ಟರ್ ಚಾಲಕ ಟ್ರಾಕ್ಟರನ್ನು ಒಮ್ಮೆಲೆ ತಿರುವು ತೆಗೆದುಕೊಂಡು ಮುಂದೆ ಹೋಗುತ್ತಿದ್ದ ದ್ವಿ-ಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ. ಸದರಿ ಅಪಘಾತದಲ್ಲಿ ದ್ವಿ-ಚಕ್ರ ವಾಹನದ ಮೇಲೆ ಪ್ರಯಾಣಿಸುತ್ತಿದ್ದ ಇಬ್ಬರು ಕೆಳಗೆ ಬಿದ್ದು ಅದರಲ್ಲಿ ಒಬ್ಬನಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದ. ಇನ್ನೊಬ್ಬ ಗಾಯಾಳುವನ್ನು ಅಂಬ್ಯುಲೆನ್ಸಿನಲ್ಲಿ ಕಲ್ಬುರ್ಗಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದರು. ಅಪಘಾತದಲ್ಲಿ ಮೃತಪಟ್ಟಿದ್ದ ವ್ಯಕ್ತಿಯ ಶವಪರೀಕ್ಷೆ ಕಲ್ಬುರ್ಗಿ ಆಸ್ಪತ್ರೆಯಲ್ಲಿ ಜರುಗಿಸಿದ ನಂತರ ಅಪಘಾತದಲ್ಲಿ ಮೃತಪಟ್ಟ ದಾವಲ್ ಸಾಬ್ ರವರ ಶವವನ್ನು ಗ್ರಾಮಕ್ಕೆ ತೆಗೆದುಕೊಂಡು ಬಂದಿರುತ್ತೇವೆ. ಸದರಿ ದಾವಲ್ ಸಾಬ್ ನಮ್ಮ ಗ್ರಾಮದವನು.

ಅಪಘಾತವಾದ 3-4 ದಿನಗಳ ನಂತರ ಪೊಲೀಸರು ನನಗೆ ಪಂಚನಾಮೆಗೆ ಕರೆದಿದ್ದರು. ಪಂಚನಾಮೆ ಸಮಯದಲ್ಲಿ ಪೊಲೀಸರಿಗೆ ಅಪಘಾತದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಅಪಘಾತದ ಸ್ಥಳದಲ್ಲಿ ವಾಹನಗಳಿಗೆ ಜಖಂಗಳಾಗಿ ದ್ವಿ-ಚಕ್ರವಾಹನದ ಡೂಮ್ ಹಾಗೂ ಇತರೆ ಭಾಗಗಳ ತುಂಡು ಬಿದ್ದಿದ್ದವು. ಅಪಘಾತ ಸ್ಥಳದಲ್ಲಿ ರಕ್ತ ಆರಿತ್ತು. ರಕ್ತ ಒಣಗಿದ ನಂತರ ಸದರಿ ಅಪಘಾತದ ಸ್ಥಳದಲ್ಲಿ ರಕ್ತದ ಬಣ್ಣ ಬದಲಾಗಿತ್ತು. ಸದರಿ ದ್ವಿ-ಚಕ್ರ ವಾಹನ ಜೇವರ್ಗಿ-ಕಲ್ಬುರ್ಗಿ ರಸ್ತೆಯ ಬಿಳಿ ಪಟ್ಟಿಯ ಎಡಭಾಗದಲ್ಲಿ ಕಚ್ಚಾರಸ್ತೆಯ ಮೇಲೆ ಹೋಗುತ್ತಿತ್ತು. ಪೊಲೀಸರಿಗೆ ನಾನು ಅಪಘಾತದ ಸ್ಥಳ ಸದರಿ ಕಚ್ಚಾರಸ್ತೆ ಅಂತಾ

ತೋರಿಸಿರುತ್ತೇನೆ. ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದಾಗಿರುತ್ತದೆ. ಅಪಘಾತದ ಸ್ಥಳವನ್ನು ನೋಡಿದರೆ ಅಪಘಾತವು ದ್ವಿ-ಚಕ್ರ ವಾಹನದ ಚಾಲಕನ ತಪ್ಪಿನಿಂದಾಗಿಲ್ಲ ಈಗ ಮೇಲೆ ಹೇಳಿದ ರೀತಿಯಲ್ಲಿ ಪಂಚನಾಮೆ ಮಾಡಿದ ನಂತರ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಪೊಲೀಸರು ಒಂದು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

**ಎದುರುದಾರ ಹಾಗೂ ಎದುರುದಾರನ ಪರ ವಕೀಲರನ್ನು ಕರೆಯಿಸಲಾಗಿ ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು
ಜೇವರ್ಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC-1273/2022**

**ದಿನಾಂಕ 15-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಅಫ್ರೋಜ್ | PW-3 |
| ತಂದೆಯ ಹೆಸರು | ಃ | ಲಾಲ್ ಸಾಬ್ ಅತನೂರು | |
| ವಯಸ್ಸು | ಃ | 28 ವರ್ಷ | |
| ಉದ್ಯೋಗ | ಃ | ವ್ಯಾಪಾರ | |
| ವಾಸಸ್ಥಳ | ಃ | ಯಡ್ರಾಮಿ | |

**ಮುಖ್ಯ ವಿಚಾರಣೆಃ ಶ್ರೀ ಎಸ್.ಎ.ಕೆ. ಅಜಿರ್ದಾರರ ಪರ ವಕೀಲರಿಂದಃ**

ದಿನಾಂಕ 14-08-2022 ರಂದು ಮಧ್ಯಾಹ್ನ 01-30 ಗಂಟೆ ಸಮಯದಲ್ಲಿ ಕಟ್ಟಿಸಂಗಾವಿಯ ಸೇತುವೆ ಮುಂದೆ ಹಸನಾಪೂರ ಹಳ್ಳಿ ಬಳಿ ಒಂದು ಟ್ರ್ಯಾಕ್ಟರ್ ಜೇವರ್ಗಿ ಕಡೆಯಿಂದ ಕಲ್ಬುರ್ಗಿ ಕಡೆಗೆ ಹೋಗುತ್ತಿದ್ದು ಆಗ ಟ್ರ್ಯಾಕ್ಟರ್ ದ್ವಿ-ಚಕ್ರ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ ಅಪಘಾತವಾದ 2 ನಿಮಿಷಗಳ ನಂತರ ನಾನು ಅಪಘಾತದ ಸ್ಥಳಕ್ಕೆ ಹೋಗಿದ್ದೆ. ಅಪಘಾತದ ಸ್ಥಳದಲ್ಲಿ ಇಬ್ಬರು ಜನ ಬಿದ್ದಿದ್ದು ಅದರಲ್ಲಿ ಒಬ್ಬ ಪರಿಸ್ಥಿತಿ ಚಿಂತಾಜನಕವಾಗಿದ್ದು, ಮತ್ತೊಬ್ಬನಿಗೆ ಸ್ವಲ್ಪ ಗಾಯಗಳು ಆಗಿದ್ದವು. ಸದರಿ ಪರಿಸ್ಥಿತಿ ಚಿಂತಾಜನಕವಾಗಿದ್ದ ವ್ಯಕ್ತಿಯನ್ನು ಕಲ್ಬುರ್ಗಿಗೆ ಕರೆದುಕೊಂಡು ಹೋಗುವ ಮಾರ್ಗಮಧ್ಯದಲ್ಲಿ ಮೃತಪಟ್ಟಿರುತ್ತಾನೆ.

ಸದರಿ ಅಪಘಾತದ ದಿನ ಮೃತಪಟ್ಟ ವ್ಯಕ್ತಿಯ ಹೆಸರು ದಾವಾಲ್ ಸಾಬ ಖಾನಾಪೂರ ಅವರು ನನ್ನ ಸ್ನೇಹಿತನ ತಂದೆ. ದಿನಾಂಕ 14-08-2022 ರಂದು ಪೊಲೀಸರು ಪಂಚನಾಮೆಯನ್ನು ನಮ್ಮ ಸಮಕ್ಷಮದಲ್ಲಿ ಮಾಡಿರುತ್ತಾರೆ. ಅಪಘಾತದ ಸ್ಥಳದಲ್ಲಿ ಗಾಯಾಳುಗಳ ರಕ್ತ ಬಿದ್ದಿತ್ತು ಹಾಗೂ ವಾಹನಗಳ ಇಂಡಿಕೇಟರ್ ನ ಗಾಜು ಮತ್ತು ಡೂಮ್ ಬಿದ್ದಿತ್ತು. ಅಪಘಾತದ ಸ್ಥಳ ಜೇವರ್ಗಿ-ಕಲ್ಬುರ್ಗಿಯ ರಸ್ತೆಯ ಹಸನಾಪೂರ ಗ್ರಾಮದ ಬಳಿ ಇದ್ದು ಅಪಘಾತವು ಜೇವರ್ಗಿ-ಕಲ್ಬುರ್ಗಿಯ ರಸ್ತೆಯ ಎಡಭಾಗದ ಬಿಳಿ ಪಟ್ಟಿಯ ಪಕ್ಕದ ಕಚ್ಚಾ ರಸ್ತೆಯಲ್ಲಿ ಆಗಿರುತ್ತದೆ. ನಾನು ಪೊಲೀಸರಿಗೆ ಅಪಘಾತದ ಸ್ಥಳವನ್ನು ತೋರಿಸಿ ಇದೇ ಸ್ಥಳದಲ್ಲಿ ಅಪಘಾತವಾಗಿರುತ್ತದೆ ಎಂದು ತೋರಿಸಿರುತ್ತೇನೆ. ಪಂಚನಾಮೆಯನ್ನು ಬರೆದ ನಂತರ ಸಹಿ ಮಾಡಿರುತ್ತೇನೆ. ಪೊಲೀಸರು ಒಂದು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದಾಗಿರುತ್ತದೆ. ದ್ವಿ-ಚಕ್ರ ವಾಹನವನ್ನು ದಾವಲ್ ಸಾಬ್ ಖಾನಾಪೂರರವರು ಚಾಲನೆ ಮಾಡುತ್ತಿದ್ದು ಅವರು ಮದ್ಯ ಸೇವನೆ ಮಾಡುತ್ತಿರಲಿಲ್ಲ ಹಾಗೂ ಅವರು ದ್ವಿ-ಚಕ್ರ ವಾಹನವನ್ನು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡುತ್ತಿರಲಿಲ್ಲ

**ಎದುರುದಾರ ಹಾಗೂ ಎದುರುದಾರನ ಪರ ವಕೀಲರನ್ನು ಕರೆಯಿಸಲಾಗಿ ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು
ಜೇವರ್ಗಿ